15ನೇ se SL.NO:- 23. ದಿ:- 20-08-2026

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಜಗದೇವ ಗುತ್ತೇದಾರ, ಇವರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಸೂಚನೆಗೆ ಉತ್ತರ.**

**ಪ್ರಶ್ನೆ:** ವರದಕ್ಷಿಣೆ ಕಿರುಕುಳದಿಂದ 617 ಮಹಿಳೆಯರು ಬಲಿಯಾಗಿದ್ದಾರೆ ಎಂಬ ಆಘಾತಕಾರಿ ವಿಷಯವು ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಕಳೆದ 4 ವರ್ಷಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 617 ಮಹಿಳೆಯರು ವರದಕ್ಷಿಣೆ ಕಿರುಕುಳದಿಂದ ಮೃತಪಟ್ಟಿದ್ದಾರೆ. ರಾಜ್ಯ ಮಹಿಳಾ ಆಯೋಗವು 2022 ರಿಂದ 2026ರ ಜೂನ್‌ವರೆಗೆ ರಾಜ್ಯದಲ್ಲಿ ದಾಖಲಾಗಿರುವ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳ ಅಂಕಿ-ಅಂಶ ಬಿಡುಗಡೆ ಮಾಡಿದ್ದು, ಅದರಲ್ಲಿ ಈ ಅಂಶ ಬೆಳಕಿಗೆ ಬಂದಿದೆ. ವರದಕ್ಷಿಣೆ ಕಿರುಕುಳದಿಂದ ಮಹಿಳೆಯರ ಸಾವು, ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಪತಿಯ ಕ್ರೌರ್ಯದ ಪ್ರಕರಣಗಳನ್ನು ವರದಿಯಲ್ಲಿ ದಾಖಲಿಸಲಾಗಿದೆ. 617 ವರದಕ್ಷಿಣೆ ಸಾವಿನ ಪ್ರಕರಣಗಳ ಪೈಕಿ 32 ನಕಲಿ ಪ್ರಕರಣಗಳಾಗದ್ದರೆ, ನಾಲ್ಕುವರೆ ವರ್ಷದಲ್ಲಿ 7 ಮಂದಿಗೆ ಮಾತ್ರ ಶಿಕ್ಷೆಯಾಗಿದೆ. 467 ಪ್ರಕರಣಗಳು ಇನ್ನೂ ವಿವಿಧ ನ್ಯಾಯಾಲಯಗಳಲ್ಲಿವೆ. ಸಾವಿನ ಪ್ರಕರಣಗಳಲ್ಲಿ ಕೂಡ ಶಿಕ್ಷೆಯ ಪ್ರಮಾಣ ಬಹಳಷ್ಟು ಕಡಿಮೆಯಾಗಿದ್ದು, ಶಿಕ್ಷೆಯ ಪ್ರಮಾಣದ ಬಗ್ಗೆ ಪ್ರಶ್ನೆಗಳು ಏತ್ತುತ್ತಿವೆ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಕುರಿತು 2022ರಲ್ಲಿ 5,857 ಪ್ರಕರಣಗಳು ದಾಖಲಾಗಿವೆ. ತನಿಖೆ ವೇಳೆ 559 ನಕಲಿ ಪ್ರಕರಣಗಳು ಎಂದು ತಿಳಿದು ಬಂದಿದೆ. 2025ರಲ್ಲಿ 5843 ಪ್ರಕರಣಗಳು ದಾಖಲಾಗಿದ್ದರೆ 610 ನಕಲಿ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ಹೀಗೆ ಒಟ್ಟಾರೆ ನಾಲ್ಕುವರೆ ವರ್ಷಗಳಲ್ಲಿ ಲೈಂಗಿಕ ದೌರ್ಜನ್ಯದ ಒಟ್ಟು 27,828 ಪ್ರಕರಣಗಳು ದಾಖಲಾಗಿವೆ.

ವರದಕ್ಷಿಣೆ, ಲೈಂಗಿಕ ದೌರ್ಜನ್ಯ, ಅತ್ಯಾಚಾರಗಳಂತಹ ಪ್ರಕರಣಗಳು ನಡೆಯುತ್ತಿದ್ದರೂ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಗಳು ಕಡಿಮೆಯಾಗುತ್ತಿರುವುದು ಕಳವಳಕಾರಿಯಾದ ವಿಷಯದ ಬಗ್ಗೆ.

**ಉತ್ತರ:**- ರಾಜ್ಯದಲ್ಲಿ 2022 ರಿಂದ 2026 (ಜುಲೈ) ವರೆಗೆ ವರದಿಯಾಗಿರುವ ವರದಕ್ಷಿಣೆ ಸಾವು ಸೇರಿದಂತೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು, ಅವುಗಳಲ್ಲಿ 'ಬಿ' ರಿಪೋರ್ಟ್‌ಸಲ್ಲಿಸಿರುವ ಅಥವಾ ಸುಳ್ಳು/ನಕಲಿ ಪ್ರಕರಣಗಳು, ಶಿಕ್ಷೆಯಾಗಿ, ಖುಲಾಸೆಯಾಗಿರುವ ಹಾಗೂ ನ್ಯಾಯಾಲಯದಲ್ಲಿ ಇನ್ನು ವಿಚಾರಣೆಯಲ್ಲಿರುವ ಪ್ರಕರಣಗಳ ವರ್ಷವಾರು ಹಾಗೂ ಅಪರಾಧವಾರು ವಿವರಗಳು ಈ ಕೆಳಕಂಡಂತಿದೆ.

**ಮಹಿಳೆಯ ಮೇಲಿನ ಅಪರಾಧಗಳು/ದೌರ್ಜನ್ಯ ಪ್ರಕರಣಗಳು**

**2022**

| | **ವರದಿ** | **'ಬಿ' ವರದಿ /ಸುಳ್ಳು** | **ಶಿಕ್ಷೆ** | **ಖುಲಾಸೆ** | **ನ್ಯಾಯಾಲಯದ ವಿಚಾರಣೆ** |
|---|---|---|---|---|---|
| ವರದಕ್ಷಿಣೆ ಸಾವು | 161 | 18 | 6 | 36 | 100 |
| ಅತ್ಯಾಚಾರ | 537 | 48 | 14 | 156 | 248 |
| ಲೈಂಗಿಕ ಕಿರುಕುಳ | 5858 | 559 | 54 | 1709 | 3269 |
| ಗಂಡನಿಂದ ಕಿರುಕುಳ | 2779 | 255 | 24 | 835 | 1437 |
| ವರದಕ್ಷಿಣೆ ನಿಷೇಧ ಕಾಯ್ದೆ | 2245 | 217 | 3 | 595 | 1143 |

**2023**

| ವರ್ಷ | ವರದಿ | 'ಬಿ' ವರದಿ /ಸುಳ್ಳು | ಶಿಕ್ಷೆ | ಖುಲಾಸೆ | ನ್ಯಾಯಾಲಯದ ವಿಚಾರಣೆ |
|---|---|---|---|---|---|
| ವರದಕ್ಷಿಣೆ ಸಾವು | 158 | 8 | 1 | 25 | 120 |
| ಅತ್ಯಾಚಾರ | 600 | 44 | 2 | 107 | 350 |
| ಲೈಂಗಿಕ ಕಿರುಕುಳ | 6487 | 651 | 50 | 1283 | 4170 |
| ಗಂಡನಿಂದ ಕಿರುಕುಳ | 2955 | 329 | 16 | 604 | 1792 |
| ವರದಕ್ಷಿಣೆ ನಿಷೇಧ ಕಾಯ್ದೆ | 2339 | 244 | 3 | 444 | 1315 |

**2024**

| ವರ್ಷ | ವರದಿ | 'ಬಿ' ವರದಿ /ಸುಳ್ಳು | ಶಿಕ್ಷೆ | ಖುಲಾಸೆ | ನ್ಯಾಯಾಲಯದ ವಿಚಾರಣೆ |
|---|---|---|---|---|---|
| ವರದಕ್ಷಿಣೆ ಸಾವು | 112 | 0 | 0 | 9 | 100 |
| ಅತ್ಯಾಚಾರ | 621 | 52 | 3 | 53 | 405 |
| ಲೈಂಗಿಕ ಕಿರುಕುಳ | 6334 | 722 | 31 | 567 | 4661 |
| ಗಂಡನಿಂದ ಕಿರುಕುಳ | 2903 | 270 | 7 | 387 | 2033 |
| ವರದಕ್ಷಿಣೆ ನಿಷೇಧ ಕಾಯ್ದೆ | 1991 | 204 | 4 | 197 | 1261 |

**2025**

| ವರ್ಷ | ವರದಿ | 'ಬಿ' ವರದಿ /ಸುಳ್ಳು | ಶಿಕ್ಷೆ | ಖುಲಾಸೆ | ನ್ಯಾಯಾಲಯದ ವಿಚಾರಣೆ |
|---|---|---|---|---|---|
| ವರದಕ್ಷಿಣೆ ಸಾವು | 115 | 6 | 0 | 0 | 104 |
| ಅತ್ಯಾಚಾರ | 552 | 44 | 1 | 16 | 400 |
| ಲೈಂಗಿಕ ಕಿರುಕುಳ | 5854 | 617 | 6 | 81 | 4645 |
| ಗಂಡನಿಂದ ಕಿರುಕುಳ | 2938 | 240 | 3 | 88 | 2389 |

| | | | | | |
|---|---|---|---|---|---|
| ವರದಕ್ಷಿಣೆ ನಿಷೇಧ ಕಾಯ್ದೆ | 1918 | 129 | 0 | 47 | 1446 |

**2026 (ಜುಲೈ)**

| ವರ್ಷ | ವರದಿ | 'ಬಿ' ವರದಿ /ಸುಳ್ಳು | ಶಿಕ್ಷೆ | ಖುಲಾಸೆ | ನ್ಯಾಯಾಲಯದ ವಿಚಾರಣೆ |
|---|---|---|---|---|---|
| ವರದಕ್ಷಿಣೆ ಸಾವು | 83 | 0 | 0 | 0 | 39 |
| ಅತ್ಯಾಚಾರ | 348 | 80 | 0 | 0 | 120 |
| ಲೈಂಗಿಕ ಕಿರುಕುಳ | 3778 | 132 | 0 | 1 | 1348 |
| ಗಂಡನಿಂದ ಕಿರುಕುಳ | 1878 | 68 | 0 | 0 | 656 |
| ವರದಕ್ಷಿಣೆ ನಿಷೇಧ ಕಾಯ್ದೆ | 1176 | 33 | 0 | 1 | 464 |

**ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.**

1. ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ Free and Fair registration of cases ಎಂಬುದು ನಮ್ಮ ರಾಜ್ಯದ ಪೊಲೀಸ್ ಇಲಾಖೆಯ ಘೋಷವಾಕ್ಯವಾಗಿದೆ.
2. **ಮನೆ ಮನೆಗೆ ಪೊಲೀಸ್** ಕಾರ್ಯಕ್ರಮದಡಿ ಹಳ್ಳಿಗಳಲ್ಲಿ ಸಮೂಹ ಸದಸ್ಯರಿಗೆ ಜಾಗೃತಿ ಮೂಡಿಸಲಾಗುತ್ತಿದೆ.
3. ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಮತ್ತು ಸಂರಕ್ಷಣೆಗಾಗಿ '**ಚೆನ್ನಮ್ಮ ಪಡೆ**' ಮತ್ತು "**ಅಕ್ಕಪಡೆ**" ಯನ್ನು ರಚಿಸಲಾಗಿದೆ.
4. ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರಿಕರಿಗೆ ಸುರಕ್ಷೆ ಮತ್ತು ವಿಶ್ವಾಸ ನೀಡುವ ಆಶಾಕಿರಣವಾಗಿ "**ಆಸರೆ**"ಎಂಬ ಸಮುದಾಯ ಪೊಲೀಸ್ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗಿದೆ.
5. ಮಹಿಳಾ ಸಹಾಯವಾಣಿ (1091) ಮತ್ತು 22943225 ಗಳು ಮತ್ತು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ.
6. ಮಹಿಳಾ ಮತ್ತು ಮಕ್ಕಳ ಸುರಕ್ಷತೆಯ ಸಂಬಂಧವಾಗಿ 112-ERSS ಕಾರ್ಯನಿರ್ವಹಿಸುತ್ತಿದ್ದು ತ್ವರಿತ ನೆರವು ನೀಡಿ ಕರೆಗಳಿಗೆ ಸ್ಪಂದಿಸಲಾಗುತ್ತಿದೆ.
7. ಬೆಂಗಳೂರು ನಗರದಲ್ಲಿ Safe City Project ಯೋಜನೆ ಅಡಿಯಲ್ಲಿ ಮಹಿಳಾ ಸುರಕ್ಷತೆ ಸಂಬಂಧವಾಗಿ 8876 ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಲಾಗಿದೆ.
8. ಜನ ಸಂದಣಿ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಗಾಗಿ 50 ಸೇಫ್ಟಿ ಐಲ್ಯಾಂಡ್ (Safety Island) ಗಳನ್ನು ಗುರುತಿಸಿ ಮಹಿಳೆಯರಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ.
9. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳಲ್ಲಿ Women Help Desk ಗಳನ್ನು ಸೃಜಿಸಿ 24/7 ಮಹಿಳಾ ಸುರಕ್ಷತಾ ದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲಾಗುತ್ತಿದೆ.

10. ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಪೊಲೀಸ್ ಠಾಣೆಗಳು, ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕಗಳಾಗಿಯೂ ಸಹ (Anti-Human Trafficking Units) ಕಾರ್ಯನಿರ್ವಹಿಸಲಾಗುತ್ತಿದೆ. ವಿಶೇಷ ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕವು ಸಿಐಡಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ.
11. ಕೇಂದ್ರ ಸರ್ಕಾರದ ಗೃಹ ಸಚಿವಾಲಯ ಸಹಯೋಗದೊಂದಿಗೆ CCPWC (Cyber Crime Prevention Against Women and Children) ಪೋರ್ಟಲ್ ಅಡಿಯಲ್ಲಿ ಆನ್-ಲೈನ್‌ನಲ್ಲಿ ದಾಖಲಾಗುವ ದೂರುಗಳನ್ನು ದಾಖಲಿಸಿ ಕ್ರಮ ವಹಿಸಲಾಗುತ್ತದೆ.
12. ಅಪರಾಧಗಳನ್ನು ತಡೆಗಟ್ಟಲು ಹಾಗೂ ಅಪರಾಧಗಳ ಕುರಿತು ಎಫ್.ಎಂ. ಸಾಮಾಜಿಕ ಜಾಲತಾಣ, ಟಿವಿ& ಪತ್ರಿಕೆ ಮಾಧ್ಯಗಳ ಮೂಲಕ ಜನಜಾಗೃತಿ ಮೂಡಿಸಲಾಗುತ್ತಿದೆ.
13. ಕಾಣೆಯಾದ ಮಕ್ಕಳ ಮಾಹಿತಿ ಮತ್ತು ಪತ್ತೆಯಾದ ಮಕ್ಕಳ ಮಾಹಿತಿಯನ್ನು Mission Vathsalya Portal ಗಳಿಗೆ ಸಲ್ಲಿಸಿಕೊಂಡು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.
14. ಪ್ರತಿ ಗುರುವಾರ ತೆರೆದ ಮನೆ ಕಾರ್ಯಕ್ರಮಗಳನ್ನು ಮಕ್ಕಳ ಕಾನೂನಿನ ಬಗ್ಗೆ ಮಕ್ಕಳಿಗೆ ಅರಿವು/ ಜಾಗೃತಿ ಮೂಡಿಸಲಾಗುತ್ತಿದೆ.
15. ನ್ಯೂ ಕ್ರಿಮಿನಲ್ ಲಾ ಅಡಿಯಲ್ಲಿ ಮಹಿಳೆಯ ಮೇಲಿನ ದೌರ್ಜನ್ಯ ಪ್ರಕರಣಗಳನ್ನು 60 ದಿನಗಳೊಳಗೆ ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು ಕಾನೂನಿಗೆ ತಿದ್ದುಪಡಿ ತರಲಾಗಿರುತ್ತದೆ.
16. ಸಂತ್ರಸ್ತರ ದೂರು/ಅಹವಾಲುಗಳು, ಹೇಳಿಕೆಗಳು, ಜೀವಬೆದರಿಕೆ ಇದ್ದರೆ ಅಗತ್ಯ ರಕ್ಷಣೆಗಾಗಿ ಹಾಗೂ ಪರಿಶೀಲನೆಗಾಗಿ ಮುಂತಾದ ಇತರೆ ಸಮಸ್ಯೆಗಳನ್ನು ಆಲಿಸಲು ಪ್ರತಿ ತಿಂಗಳ 3ನೇ ಭಾನುವಾರವನ್ನು ಸಂತ್ರಸ್ತರ/ದೂರುದಾರರ (Victim Day) ನೊಂದವರ ದಿನವೆಂಬ ಕಾರ್ಯಕ್ರಮವನ್ನು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಯೋಜಿಸಲಾಗುತ್ತಿದೆ.
17. ಅಪರಾಧ ತಡೆಮಾಸ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮುಂತಾದ ಕಾರ್ಯಕ್ರಮಗಳ ಮೂಲಕ ಅಪರಾಧಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
18. ಸಖಿ ಒನ್ ಸ್ಟಾಪ್ ಕೇಂದ್ರಗಳಲ್ಲಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿಯಲ್ಲಿ ವೈದ್ಯಕೀಯ ಚಿಕಿತ್ಸೆ, ಆಪ್ತಸಮಾಲೋಚನೆ, ಕಾನೂನು ನೆರವು, ವಿಡಿಯೋ ಕಾನ್ಸ್‌ಫರೆನ್ಸ್ ಮೂಲಕ ಮಾನ್ಯ ನ್ಯಾಯಾಧೀಶರ ಮುಂದೆ ನೀಡುವ ಹೇಳಿಕೆಯನ್ನು ರೆಕಾರ್ಡ್ ಸೇವೆ ಇತ್ಯಾದಿ ಸೇವೆಗಳು ಒದಗಿಸುವುದು.
19. ಇತರೆ ಇಲಾಖೆಗಳ ಸಹಯೋಗದೊಂದಿಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಸಹಾಯ ಸಹಕಾರ ಒದಗಿಸಲಾಗುತ್ತಿದೆ.
20. ಮಹಿಳೆಯ ಸುರಕ್ಷತೆಗಾಗಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ KSP ವೆಬ್ಸೈಟ್‌ನಲ್ಲಿ ಈಕೆಳಕಂಡ ಸೇವೆಗಳನ್ನು ಒದಗಿಸಲಾಗುತ್ತದೆ:

- ಮಹಿಳೆಯರ ಸುರಕ್ಷತೆಗೆ ವಿಶೇಷವಾಗಿ ವಿನ್ಯಾಸ ಗೊಳಿಸಿದ ಆಪ್.
- SOS ಒತ್ತಿದತಕ್ಷಣ Control Room ಗೆ ಸೂಚನೆ + ಸ್ಥಳ ವಿವರ + Audio/Video evidence ಕಳಿಸಲಾಗುತ್ತದೆ.
- Live Location Track ERSS Command Centre ಮೂಲಕ ತ್ವರಿತ ಪ್ರತಿಕ್ರಿಯೆ.
- Women safety awareness & self-defence programs

ಸಂಖ್ಯೆ: ಹೆಚ್‌ಡಿ 33 ಎಸ್‌ಡಿಎನ್ 2026.

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು